## ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
## ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 15 ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987

### ಪ್ರಾರಂಭಿಕ ಪ್ರಮಾಣ ಪತ್ರ

ಸಂಖ್ಯೆ:ಮೈನಪ್ರಾ:ನಯೋ:ಪ್ರಾಪ್ರಪ: 1699/2017-18 ದಿನಾಂಕ: 1 FEB 2018

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯಿದೆ 1961ರ ಪ್ರಕರಣ 15 ಉಪಪ್ರಕರಣ(1)ರಡಿಯಲ್ಲಿ

ಶ್ರೀಮತಿ/ಶ್ರೀ ಮ್ಯಾನೇಜಿಂಗ್ ಟ್ರಸ್ಟಿ ದಿವ್ಯ ಜ್ಯೋತಿ ಚಾರಿಟಬಲ್ ಟ್ರಸ್ಟ್(ರಿ)
ನಂ: 151/F, 4ನೇ ಕ್ರಾಸ್, ಶ್ರೀನಿವಾಸ ಆಫ್ ಬಿಲ್ಡಿಂಗ್
ಚಿಲ್ಟ್ರೇನ್ ರೋಡ್, ಗೋಕುಲಂ 3ನೇ ಹಂತ, ಮೈಸೂರು

ಮೈಸೂರು ನಗರ, ಲಿಂಗಾಂಬುಧಿ ವಿಸ್ತರಣೆ, ಸ.ನಂ: 1/1 ಬಡಾವಣೆಯಲ್ಲಿನ ನಿವೇಶನ ಸಂಖ್ಯೆ ಸಿ.ಎ-02 ಅಳತೆ/ವಿಸ್ತೀರ್ಣ 454.39 ಚ.ಮೀ ವಸತಿ/~~ವಾಣಿಜ್ಯ/ಕೈಗಾರಿಕೆ~~/ಸಾರ್ವಜನಿಕ ಅರೆಸಾರ್ವಜನಿಕ ಉಪಯೋಗಕ್ಕೆ ಹೊಸದಾಗಿ ಕಟ್ಟಡ ಕಟ್ಟಲು/ ~~ಹಾಲಿ ಇರುವ ಕಟ್ಟಡವನ್ನು ಕೆಡವಿ ಪುನಃ ಕಟ್ಟಲು/ಭಾವಣಿಯಲ್ಲಿ ಬದಲಾವಣೆಗಳನ್ನು ಮಾಡಲು~~ ಈ ಕೆಳಗೆ ನಮೂದಿಸಿರುವ ಷರತ್ತುಗಳಿಗೆ ಒಳಪಡಿಸಿ ಕಟ್ಟಡ ನಕ್ಷೆಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

ಪ್ರಾರಂಭಿಕ ಪ್ರಮಾಣ ಪತ್ರದ ಶುಲ್ಕ:
ಮೊಬಲಗು: ರೂ: 3,00,670/- ಅಕ್ಷರಗಳಲ್ಲಿ: ಮೂರು ಲಕ್ಷದ ಆರು ನೂರ ಎಪ್ಪತ್ತು ರೂ.
ಚಲನ್ ಸಂಖ್ಯೆ: 32646 ದಿನಾಂಕ: 24-01-2018

- ಅನುಮೋದಿತ ನಕ್ಷೆಯಂತೆ ಕಟ್ಟಡ ನಿರ್ಮಿಸಬೇಕು. ಉಲ್ಲಂಘನೆಯನ್ನು ಸಕ್ರಮಗೊಳಿಸಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. ಆದಾಗ್ಯೂ ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ಕಟ್ಟಿದ್ದಲ್ಲಿ ಅದನ್ನು ಅಕ್ರಮ ಎಂದು ಪರಿಗಣಿಸಿ ಕಟ್ಟಡ ಪೂರ್ಣಗೊಂಡ (**Completion Report**) ಅರ್ಹತಾ ಪತ್ರವನ್ನು ನೀಡಲಾಗುವುದಿಲ್ಲ.
- ಅಲ್ಲದೇ, ಪ್ರಾರಂಭಿಕ ಪ್ರಮಾಣ ಪತ್ರದ ಷರತ್ತುಗಳನ್ನು ಹಾಗೂ ಅನುಮೋದಿತ ನಕ್ಷೆಯನ್ನು ಪ್ರಾಧಿಕಾರದ ಅನುಮತಿ ಇಲ್ಲದೇ ಉಲ್ಲಂಘಿಸಿದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 73 ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು, 1969ರ ನಿಯಮ 37ಎ ರಡಿಯಲ್ಲಿ ಮುಂದಿನ ಕ್ರಮ ಜರುಗಿಸಲಾಗುವುದು.

1. ರಹದಾರಿದಾರರು ಈ ಪ್ರಾಧಿಕಾರದ ಹಾಗೂ ಇತರೇ ಸ್ಥಳೀಯ ಸಂಸ್ಥೆಗಳ ಜಾಗವನ್ನು ಆಕ್ರಮಿಸಬಾರದು.
2. ಪಕ್ಕದವರ ಆಸ್ತಿಗಳಿಗೆ ಅಪಾಯವಾಗದಂತೆ ಕೆಲಸ ಮಾಡಬೇಕು.
3. ತಪ್ಪುಮಾಹಿತಿ/ದಾಖಲೆಗಳನ್ನು ಒದಗಿಸಿ ಪ್ರಾರಂಭಿಕ ಪ್ರಮಾಣ ಪತ್ರ ಪಡೆದರೆ ಸದರಿ ಪತ್ರ ಸ್ವಯಂ ರದ್ದಾಗುವುದು. ಮತ್ತು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

4. ಈ ಪ್ರಾರಂಭಿಕ ಪ್ರಮಾಣ ಪತ್ರಕ್ಕೆ 2 ವರ್ಷ ಕಾಲಾವಕಾಶ ನೀಡಲಾಗಿದೆ. ಈ ಅವಧಿಯಲ್ಲಿ ಕಟ್ಟಡ ಕಟ್ಟದಿದ್ದಲ್ಲಿ ಪುನಃ ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಯನ್ನು ಅಂದಿನ ನಿಯಾಮಾನುಸಾರದಂತೆ ಪರಿಶೀಲಿಸಲಾಗುವುದು.
5. ಆಜುಬಾಜು ಮನೆಯವರಿಗೆ ಮತ್ತು ಸಾರ್ವಜನಿಕರಿಗೂ ಸಹ ತೊಂದರೆ ಇಲ್ಲದಂತೆ ಮತ್ತು ಹಕ್ಕಿಗೆ ಬಾಧಕವಾಗದಂತೆ ನಿಮ್ಮ ಮನೆ ಕಟ್ಟಲು ಬಳಸಿದ ನೀರು ಪ್ರಾಧಿಕಾರದ ಒಳಚರಂಡಿಗೆ ಬೀಳುವಂತೆ ಮಾಡಬೇಕು.
6. ದೋಣಿ ನೀರು ಪ್ರಾಧಿಕಾರದ ಜಮೀನು ಅಥವಾ ರಸ್ತೆಯ ಮೇಲೆ ಸುರಿಯದಂತೆ ಕೆಳಗಿನವರೆಗೂ ಗೋಡೆಗೆ ಲಗತ್ತಾಗಿ ಗಟ್ಟಿದಿಂಡಿನಿಂದ/ಯಾ' ಟಿನ್ನಿನಿಂದ ಮಾಡಿದ ಸಂದಾಯ ದೋಣಿಗಳನ್ನು ಮೋರಿಗೆ ಬಿಡತಕ್ಕದ್ದು.
7. ಬಾಗಿಲು/ ಯಾ ಬೇಸ್‌ಮೆಂಟ್ ಲೆವೆಲ್ ಬೀದಿಮಟ್ಟಕ್ಕಿಂತ ಎತ್ತರವಾಗಿರತಕ್ಕದ್ದು.
8. ನಿಮ್ಮ ಮನೆಯ ಸೂರಿನ ನೀರು ಅಕ್ಕಪಕ್ಕದವರ ಮನೆಯ ಪ್ರವೇಶದಲ್ಲಿ ಬೀಳಕೂಡದು ಮತ್ತು ಬಚ್ಚಲು ಮನೆ ನೀರನ್ನು ಪ್ರಾಧಿಕಾರದ ಒಳಚರಂಡಿಗೆ ಬೀಳುವಂತೆ ಮಾಡಬೇಕು.
9. ನಿವೇಶನದ ತುದಿ(ಅಂಚು)ವರೆಗೆ ಚೆಜ್ಜಾ ಮತ್ತು ಬಾ ಲ್ಕನಿಯಗಳನ್ನು ವಿಸ್ತರಿಸಬಾರದು ಹಾಗೂ ಪ್ರೊಜೆಕ್ಷನ್‌ಗಳು ನಿಯಮಾನುಸಾರವೇ ಇರಬೇಕು. ಯಾವುದೇ ಸಂದರ್ಭದಲ್ಲಿ ಮನೆಯ ನೀರು ಅಕ್ಕಪಕ್ಕದ ನಿವೇಶನಗಳಿಗೆ ಬೀಳಬಾರದು.
10. ಛಾವಣಿಗಳನ್ನು ಬೆಂಕಿಯ ಅನಾಹುತಗಳಿಗೆ ಒಳಪಡುವ ಸಾಮಾಗ್ರಿಗಳಿಂದ ಕಟ್ಟಿಸಕೂಡದು.
11. ಕಟ್ಟಡ ಕೆಲಸ ಮಾಡಿಸುವ ಮುನ್ನ ಕಟ್ಟಡದ ಹದ್ದುಬಸ್ತನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಅಜಮಾಯಿಸಿ ಗುರ್ತು ಮಾಡಿಸಿಕೊಂಡು ಕೆಲಸ ಪ್ರಾರಂಭಿಸಬೇಕು.
12. ಈ ಪ್ರಾರಂಭಿಕ ಪ್ರಮಾಣ ಪತ್ರ ಮಂಜೂರಾತಿಯಿಂದ ಕಟ್ಟಡದ ನಿವೇಶನಕ್ಕೆ ನಿಮಗೆ (ಲೈಸೆನ್ಸ್‌ದಾರರಿಗೆ) ಇದಕ್ಕೆ ಮೊದಲು ಇಲ್ಲದ ಹಕ್ಕುದಾರಿ ಈಗ ಹೊಸದಾಗಿ ಉಂಟಾಗಿರುವುದಿಲ್ಲ ಮತ್ತು ಇತರರಿಗೆ ಇರಬಹುದಾದ ಹಕ್ಕಿಗೆ ಯಾವ ಕುಂದು ಉಂಟಾಗುವುದಿಲ್ಲ.
13. ಹೊಗೆ ಹೋಗಲು ಇರತಕ್ಕ ಚಿಮಣಿಗಳು ಮಾಳಿಗೆ ಮಟ್ಟಕ್ಕಿಂತ ನಾಲ್ಕು ಅಡಿ ಕಡಿಮೆ ಇಲ್ಲದಂತೆ ಎತ್ತರಿಸಿ ಕಟ್ಟಬೇಕು.
14. ಪ್ರಾಧಿಕಾರದ ಅಧಿಕಾರಿಗಳು ಬಂದು ಕೇಳಿದಲ್ಲಿ ತೋರಿಸಲು ಪ್ರಾರಂಭಿಕ ಪ್ರಮಾಣ ಪತ್ರದ ಪ್ರತಿ ಮತ್ತು ಅನುಮೋದಿತ ನಕ್ಷೆ ಸಹ ಕಟ್ಟಡ ಕಟ್ಟುವ ವೇಳೆಯಲ್ಲಿ ನಿಮ್ಮ ಬಳಿ ಸದಾ ಸಿದ್ದವಿರಬೇಕು.
15. ಕಟ್ಟಡದ ನಿವೇಶನದಲ್ಲಿ ಪಾಯಕ್ಕೆ ಹೊರತುಪಡಿಸಿ ಬೇರೆ ಹಳ್ಳ ತೆಗೆಯಕೂಡದು.
16. ಕೆಲಸ ಪೂರೈಸಿದ ಒಂದು ತಿಂಗಳ ಒಳಗಾಗಿ ಲಿಖಿತ ಮೂಲಕ ಪ್ರಾಧಿಕಾರದ ಕಛೇರಿಗೆ ತಿಳುಹಿಸಿ ಕಟ್ಟಡ ಪೂರ್ಣಗೊಂಡ ಅರ್ಹತಾ ಪತ್ರವನ್ನು ಪಡೆದುಕೊಳ್ಳತಕ್ಕದ್ದು.
17. ಈ ಪ್ರಾರಂಭಿಕ ಪ್ರಮಾಣ ಪತ್ರದ ಬಗ್ಗೆ ಯಾವುದೇ ಸಂಶಯವಿದ್ದಲ್ಲಿ ಕಟ್ಟಡ ಪ್ರಾರಂಭಿಸುವ ಮುನ್ನ ಪ್ರಾಧಿಕಾರದಿಂದ ಸೃಷ್ಟೀಕರಣ ಪಡೆಯಬೇಕು.
18. ಇತರೆ–ಷರತ್ತುಗಳು.

B.N.

ನಗರ ಯೋಜನಾ ಸಹಾಯಕ ನಿರ್ದೇಶಕರು
ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ದಿನಾಂಕ 1 FEB 2018 ರಂದು ಮೇಲ್ಕಂಡ ನಿಬಂಧನೆಗಳನ್ನು ಒಪ್ಪಿ ರಹದಾರಿಯನ್ನು ಪಡೆದಿರುತ್ತೇನೆ.

For DIVYA JYOTHI CHARITABLE TRUST (R.)

ಅರ್ಜಿದಾರರ ಸಹಿ (ಹೆಸರು ದಪ್ಪ ಅಕ್ಷರಗಳಲ್ಲಿ)

Managing Trustee
M.A. SHIVAPRAKASH